**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 17128 /2022** **ಪ್ರಾ.ಸಾ – 1**
**ಚಾ.ಸಾ – 2**

**ದಿನಾಂಕ: 17-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಕ. ಎಂ |
| ತಂದೆಯ ಹೆಸರು | : | ಮಲ್ಲೇಶಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಿಬ್ಬನಹಳ್ಳಿ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ಆರೋಪಿತರು ನನಗೆ ಗೊತ್ತು . ಅವರು ನನ್ನ ತಾಯಿ , ಅಣ್ಣ , ತಮ್ಮ , ಅತ್ತೆ ಆಗಬೇಕು. ಚಾಸಾ-1 ನನ್ನ ಹೆಂಡತಿ , ಚಾಸಾ-4 ನನ್ನ ಮಗಳು, ಚಾಸಾ-3 ನನ್ನ ಅತ್ತೆ , ಚಾಸಾ-5 ರಿಂದ 8 ರವರು ನನ್ನ ಊರಿನವರು .

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ನಮ್ಮ ಮತ್ತು ಅರೋಪಿತರ ನಡುವೆ ದಾರಿಯ ಸಂಬಂದ ಸಣ್ಣ ಪುಟ್ಟ ಮಾತಿನ ಚಕಾಮಕಿ ಆಗಾಗ ನೆಡೆಯುತ್ತಿದ್ದು ಇದರ ಸಂಬಂದ ಚಾಸ--1 ಪೋಲಿಸ್ ಠಾಣೆಗೆ ಹೋಗಿ ಪೋಲಿಸರಿಗೆ ಅರೋಪಿತರನ್ನು ಕರೆಸಿ ಬುದಿವಾದ ಹೇಳುವಂತೆ ತಿಳಿಸಿದ್ದು, ಆ ಕಾಲಕ್ಕೆ ಪೋಲಿಸರು ಚಾಸಾ-1 ರವರ ಕೆಲವು ಸಹಿಗಳನು ಪಡೆದಿರುತ್ತಾರೆ. ಸದರಿ ಸಹಿಗಳನ್ನು ಯಾವ ಕಾರಣಕ್ಕಗಿ ಪಡೆದಿರುತ್ತಾರೆಂದು ನನಗೆ ಗೂತ್ತಿಲ್ಲ. ಚಾಸಾ-1 ರವರು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಪೋಲಸಿರ ಮುಂದೆಯಾವುಂದೇ ಹೇಳಿಕೆಯ್ನು ನೀಡಿರುವುದಿಲ್ಲ. ಆರೋತರು ನಮಗೆ ಹೊಡೆದಿರುವುದಿಲ್ಲ, ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ.

ನನ್ನ ಹೆಂಡತಿಯಾದ ಚಾಸಾ1 ರವರ ಸಹಿಯನ್ನು ನೋಡಿದರೆ ಗುರುತಿಸಿರುತ್ತೇನೆ.

ಸಾಕ್ಷಿಯು ಕಡತಲ್ಲಿರುವ ದೂರಿನಲ್ಲಿ ಚಾಸಾ-1 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಹಾಗೂ ಚಾಸಾ-1 ರವರ ಸಹಿಯನ್ನು ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನೆಡೆದ ಸ್ಥಳದ ಪಂಚನಾಮೆಯಲ್ಲಿ ಚಾಸಾ-1 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು ಹಾಗೂ ಚಾಸಾ-1 ರವರ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುವುದಿಲ್ಲ. ನಾನು ತೋಟದಲ್ಲಿ ಕೆಲಸ ಮಾಡುವಾಗ ಬಿದ್ದು ಗಾಯ ಮಾಡಿಕೊಂಡಿದ್ದು ಇದರ ಸಂಬಂಧ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆ.

ಸಾಕ್ಷಿ ಕಡತದಲ್ಲಿರುವ ಎರಡು ಭಾವಚಿತ್ರಗಳಲಿ ಚಾಸಾ-1 ರವರನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ವಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ದಿನಾಂಕ 03-05-2022 ರಂದು ನಾನು ಚಾಸಾ-11 ರವರ ಸಮಕ್ಷಮ " ದಿನಾಂಕ 27-04-2022 ರಂದು ----------------------------- ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತತೇನ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು.

ದಿನಾಂಕ 27-04-2022 ರಂದು ಸಂಜೆ ಸುಮಾರು 6.00 ರ ಸಮಯದಲ್ಲಿ 1 ರಿಂದ 4ನೇ ಆರೋತಪಿರ ಜಮೀನಿನ ವಿಚಾರವಾಗಿ ದ್ವೇಷ ದಿಂದ ಬಂದು ಟ್ರಾಕ್ಟರ್ ನಿಂದ ಗ್ದುದ್ದಿ ನಿಮ್ಮ ಮನೆಯ ಕಾಂಪೌಂಡನ್ನು ಕಡವುತ್ತೇಂದು ಹಾಗೂ ನಾವು ಮನೆಯ ಪಕ್ಕ ಕಲ್ಲುಗಳನ್ನು ಹಾಕಿದ್ದನ್ನು ನೋಡಿ ಮನೆಯ ಮುಂದೆ ದಾರಿಗೆ ಕಲ್ಲುಗಳನ್ನು ಹಾಕಿಕೊಂಡಿದ್ದೀರಿ ಎಂದು ಕೂಗಾಡುತ್ತಿದ್ದರು ಎಂದ ರೆ ಸರಿಯಲ್ಲ. ನಾನು ಮತ್ತು ಚಾಸ್ಸಾ-1

ರವರು ಬಂದು ಓಡಾಡಲು ಏನು ತೊಂದರೆ ಇಲ್ಲ , ಮನೆಯ ಪಕ್ಕ ಹಾಕಿಕೊಂಡಿದ್ದೇವೆ ಅದು ಹೇಗೆ ಕಾಂಪೌಂಡ್ ಕೆಡವುತ್ತೀರಾ ಎಂದು ಕೇಳುತ್ತಿದ್ದಾಗ 1ನೇ ಆರೋಪಿತನು ಕೈಯಿಂದ ಗುದ್ದಿ ಕೆಳಕ್ಕೆ ಬೀಳಿಸಿ 2ನೇ ಅರೋಪಿತನು ಕೈಯಿಂದ ಹೊಡೆದು , 3ನೇ ಆರೋಪಿ ಕೊಡಲಿಯಿಂದ ನನ್ನ ಬಲಗೈಗೆ ಹೊಡೆದಿದ್ದು , 1ನೇ ಆರೋಪಿ ಮನೆಯಿಂದ ಕಬ್ಬಿಣದ ರಾಡನ್ನು ತಂದು ನನ್ನ ಎಡಗೈಗೆ ಹೊಡೆದು ಹಲ್ಲಿನಿದಿಂದ ಬೆನ್ನಿಗೆ ಕಚ್ಚಿದನು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ 2 ರಿಂದ 4ನೇ ಆರೋಪಿತರ ಜುಟ್ಟನ್ನು ಹಿಡಿದು ಎಳೆದಾಡಿ ಬಟ್ಟೆಯನ್ನು ಕಿತ್ತಿರುತ್ತಾರೆ ಎಂದರೆ ಸ ರಿಯಲ್ಲ. 1ನೇ ಆರೋಪಿ ಚಾಸ--4 ರವರ ಕಪಾಳಕ್ಕೆ ಹೊಡೆದು ಬೇಲಿಗೆ ಬಿಸಾಡಿದನು ಎಂದರೆ ಸರಿಯಲ್ಲ. 2ನೇ ಅರೋಪಿ ನಮ್ಮ ಮನೆಯಾಳಗೆ ಇದ್ದ ಚಾಸಾ-3 ರವರನುನ ಎಳೆದುಕೊಂಡು ಬಂದು ನೂಕಿ ಅವರ ತಲೆಗೆ, ಎದೆಗೆ ಪೆಟ್ಟಾಗಿರುತ್ತದೆಎಂದರೆ ಸ ರಿಯಲ್ಲ. 2ನೇ ಆರೋಪಿತನು ಕೈಯಲ್ಲಿದ್ದ ಕುಡುಗೋಲಿನಿಂದ ಚಾಸಾ-3 ರವರ ಎಡಮುಂಗೈಗೆ ಹೊಡೆದಿರುತ್ತಾರೆಂದರೆ ಸರಿಯಲ್ಲ. 1ನೇ ಆರೋಪಿ ಚಾಸ--3 ರವರ ಎದೆಗೆ , ಕೈಗೆ ಹೊಡೆದಿರುತ್ತಾನೆ ಎಂದರೆ ಸ ರಿಯಲ್ಲ. ಆಕಾಲಕ್ಕೆ ಚಾಸ--5 ಮತ್ತು 6 ರವರು ಸ್ದಳಕ್ಕೆ ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು 5 ರವರು ನನ್ನನ್ನು ಮತ್ತು ಚಾಸ--3ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು ಎಂದರೆ ಸ ರಿಯಲ್ಲ.ಇದರ ಸಂಬಂದ ನಿಪಿ.1 ರಂತೆ ಚಾಸ--1 ರವರು ದೂರನ್ನು ನೀಡಿರುತ್ರಾರೆ ಎಂದರೆ ಸ ರಿಯಲ್ಲ. ಚಾಸ--1 ಮತ್ತು 3 ರವರು ಈಗ ಮೃತ ಪಟ್ಟಿರುತ್ತಾರೆಂದರೆ ಸರಿ .

ಆರೂಪಿತನೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ . ಆ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**